# ದಿ ಮುಸ್ಲಿಂ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್

**ನ್ಯೂ ಸಯ್ಯಾಜಿರಾವ್‌ರಸ್ತೆ, ಮೈಸೂರು–570001**
**ದೂರವಾಣಿ ಸಂಖ್ಯೆ: 0821– 2442866**

## <u>ಸಿಬ್ಬಂಧಿ ನೇಮಕಾತಿ ಪ್ರಕಟಣೆ</u>

**ಮೇಲ್ಕಂಡ ಬ್ಯಾಂಕಿನಲ್ಲಿ ಖಾಲಿ ಇರುವ ಈ ಕೆಳಗಿನ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.**

| ಹುದ್ದೆಯ ಪದನಾಮ | ಒಟ್ಟು ಹುದ್ದೆಗಳ ಸಂಖ್ಯೆ | ವಿದ್ಯಾರ್ಹತೆ | ವೇತನ ಶ್ರೇಣಿ |
|---|---|---|---|
| ಮುಖ್ಯಕಾರ್ಯನಿರ್ವಾಹಣಾಧಿಕಾರಿ | 01 (ಒಂದು) | ಯಾವುದೆ ಅಂಗೀಕೃತ ವಿಶ್ವವಿದ್ಯಾನಿಲಯ ದಿಂದ ಎಂ.ಕಾಂ ಅಥವಾ ಎಂ.ಬಿ.ಎ ಮಾಸ್ಟರ್ ಡಿಗ್ರಿ ಪದವಿಯನ್ನು ಹೊಂದಿರಬೇಕು. (ಪದವಿಯ ಎಲ್ಲಾ ವರ್ಷದ ಸರಾಸರಿ ಶೇಕಡ 50 ಮತ್ತು ಶೇಕಡ 50 ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದುತೇರ್ಗಡೆ ಹೊಂದಿರಬೇಕು.) ಸರ್ಕಾರದಿಂದ ಮಾನ್ಯತೆ ಪಡೆದ ಶಿಕ್ಷಣ ಸಂಸ್ಥೆಯಿಂದ ಕಂಪ್ಯೂಟರ್ ಆಪರೇಷನ್ ಮತ್ತು ಅಪ್ಲಿಕೇಷನ್ ಕೋರ್ಸ್‌ನ್ನು ಮಾಡಿರಲೇಬೇಕು.<br>ಜನರಲ್ ಡಿಪ್ಲೋಮಾ ಕೋ–ಆಪರೇಟಿವ್ ಮ್ಯಾನೇಜ್ಮೆಂಟ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದವರಿಗೆ ಹಾಗೂ ಸಹಕಾರ ಬ್ಯಾಂಕ್ ವ್ಯವಸ್ಥಾಪಕನ ಹುದ್ದೆ ಅಥವಾ ಅದಕ್ಕಿಂತ ಮೇಲ್ಪಟ್ಟ ಹುದ್ದೆಯಲ್ಲಿ ಕನಿಷ್ಠ 8 ವರ್ಷಗಳ ಸೇವೆ ಸಲ್ಲಿಸಿದವರಿಗೆ ಆಧ್ಯತೆ ನೀಡಲಾಗುವುದು. | ರೂ.53,100–1,250–59,350–1,450–65,600–1,650–74,850–1,900–84,350,–2,200–95,350. |
| ಕಿರಿಯ ಸಹಾಯಕರು | 08 (ಎಂಟು) | ಯಾವುದೆ ಅಂಗೀಕೃತ ವಿಶ್ವವಿದ್ಯಾ ನಿಲಯ ದಿಂದ ಬಿ.ಕಾಮ್/ಬಿ.ಬಿಎ/ಬಿ.ಬಿ.ಎಂ/ಬಿ.ಸಿ.ಎ ಯಾವುದೇ ಪದವಿಯನ್ನು ಹೊಂದಿರಬೇಕು. (ಪದವಿಯ ಎಲ್ಲಾ ವರ್ಷದ ಸರಾಸರಿ ಶೇಕಡ 50 ಮತ್ತು ಶೇಕಡ 50 ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದು ತೇರ್ಗಡೆ ಹೊಂದಿರಬೇಕು.) ಕಂಪ್ಯೂಟರ್ ಆಪರೇಷನ್ ಮತ್ತು ಅಪ್ಲಿಕೇಷನ್ ಜ್ಞಾನವಿರಬೇಕು | ರೂ.25,900–750–29,650–850–33,900–950–38,650–1,100–44,150–1,250–50,400–1,450–57,650. |

| | | | |
|---|---|---|---|
| ಅಟೆಂಡರ್ | 02(ಎರಡು) | ಎಸ್.ಎಸ್.ಎಲ್.ಸಿ ಯಲ್ಲಿ ಉತ್ತೀರ್ಣರಾಗಿದ್ದು, ಕನ್ನಡ ಭಾಷೆಯಲ್ಲಿ ಬರೆಯುವ, ಓದುವ, ಮತ್ತು, ಮಾತನಾಡುವ ಸ್ಪಷ್ಟ ಜ್ಞಾನವಿರಬೇಕು. | ರೂ.22,100–650–25,350–750–29,100–850–33,350–950–38,100–1,100–43,600–1,250–49,850. |

**ನಿಬಂಧನೆಗಳು:**

1. ಮುಖ್ಯಕಾರ್ಯನಿರ್ವಾಹಣಾಧಿಕಾರಿ ಮತ್ತು ಕಿರಿಯ ಸಹಾಯಕರಿಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಕನ್ನಡ ಹಾಗೂ ಇಂಗ್ಲೀಷ್ ಭಾಷೆಯಲ್ಲಿ ಓದುವ, ಬರೆಯುವ, ಮಾತನಾಡುವ ಹಾಗೂ ವ್ಯವಹಾರದ ಜ್ಞಾನವಿರಬೇಕು.
2. **ಅಭ್ಯರ್ಥಿಗಳ ವಯೋಮಿತಿ:** ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಅರ್ಜಿಯನ್ನು ಸಲ್ಲಿಸುವಕೊನೆಯ ದಿನಾಂಕಕ್ಕೆ ಕನಿಷ್ಠ 18 ವರ್ಷಗಳಾಗಿರಬೇಕು ಹಾಗೂ ಕರ್ನಾಟಕ ಸಹಕಾರ ಸಂಘಗಳ ಕಾಯಿದೆ ಮತ್ತು ನಿಯಮಗಳನ್ವಯ ಈ ಕರಳಕಂಡ ಗರಿಷ್ಠ ವಯೋಮಿತಿಗಳೊಳಪಟ್ಟಿರಬೇಕು.
    1. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಅಥವಾಇತರೆ ಹಿಂದುಳಿದ ವರ್ಗಗಳ ವರ್ಗ–1 ಕ್ಕೆ ಸೇರುವ ಅಭ್ಯರ್ಥಿಗಳಿಗೆ – ಗರಿಷ್ಠ 40 (ನಲವತ್ತು) ವರ್ಷಗಳು.
    2. ಇತರ ಹಿಂದುಳಿದ ವರ್ಗಗಳ ಅಭ್ಯರ್ಥಿಗಳಿಗೆ (2ಎ,2ಬಿ,3ಎ,3ಬಿ) – ಗರಿಷ್ಠ 38 (ಮೂವತ್ತೆಂಟು) ವರ್ಷಗಳು.
    3. ಸಾಮಾನ್ಯ ವರ್ಗದ ಅಭ್ಯರ್ಥಿಗಳಿಗೆ – ಗರಿಷ್ಠ 35 (ಮೂವತ್ತೈದು) ವರ್ಷಗಳು.

3. ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡ ಅಥವಾ ಇತರೆ ಹಿಂದುಳಿದ ವರ್ಗಕ್ಕೆ ಸೇರುವ ಅಭ್ಯರ್ಥಿಗಳು ಸಕ್ಷಮ ಪ್ರಾಧಿಕಾರದಿಂದ ಪಡೆದಿರುವ ಹಾಗೂ ಗೆಜೆಟೆಡ್ ಅಧಿಕಾರಿಗಳಿಂದ ದೃಢೀಕರಿಸಿದ ಈವರೆವಿಗೆ ಚಾಲ್ತಿಯಲ್ಲಿರುವ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಲಗತ್ತಿಸಬೇಕು.
4. ಈ ಹುದ್ದೆಗೆ ಅರ್ಹ ಅಭ್ಯರ್ಥಿಗಳಿಗೆ ಲಿಖಿತ ಪರೀಕ್ಷೆ ಹಾಗೂ ಮೌಖಿಕ ಸಂದರ್ಶನ ನಡೆಯುವ ಮೂಲಕ ಆಯ್ಕೆ ಮಾಡಲಾಗುವುದು; 200 ಅಂಕಗಳ ಲಿಖಿತ ಪರಿಕ್ಷೆಇದ್ದು, ಈ ಪೈಕಿ ಕನ್ನಡ ಭಾಷೆಗಾಗಿ 50 ಅಂಕಗಳು, ಸಾಮಾನ್ಯಇಂಗ್ಲೀಷ್‌ಗಾಗಿ 25 ಅಂಕಗಳು, ಸಾಮಾನ್ಯ ಜ್ಞಾನಕ್ಕಾಗಿ 25 ಅಂಕಗಳು, ಸಹಕಾರ ವಿಷಯಕ್ಕೆ 50 ಅಂಕಗಳು ಮತ್ತು ಭಾರತದ ಸಂವಿಧಾನಕ್ಕಾಗಿ 25 ಅಂಕಗಳು, ಬ್ಯಾಂಕಿನ ಹುದ್ದೇಶಗಳು ಮತ್ತು ಕಾರ್ಯಚಟುವಟಿಕೆಗಳಿಗಾಗಿ 25 ಅಂಕಗಳು= ಒಟ್ಟು 200 ಅಂಕಗಳಿಗೆ ಬಹು ಆಯ್ಕೆ ಮಾದರಿಯ (Objective Type Multiple Choice) ಪ್ರಶ್ನೆಗಳು ಒಳಗೊಂಡಿರುತ್ತದೆ, ಅಭ್ಯರ್ಥಿಯು ಲಿಖಿತ ಪರಿಕ್ಷೆಯಲ್ಲಿ ಪಡೆದ ಅಂಕಗಳ ಆಧಾರದ ಮೇಲೆ 1:5 ಅನುಪಾತದಲ್ಲಿ ಮೌಖಿಕ ಸಂದರ್ಶನ ನಡೆಸಿ, ಆಯ್ಕೆ ಮಾಡಲಾಗುವುದು.
5. ಅರ್ಜಿಯನ್ನು ಸ್ವ– ಹಸ್ತಾಕ್ಷರದಲ್ಲಿ ಭರ್ತಿ ಮಾಡತಕ್ಕದ್ದು, ತಪ್ಪು ಹಾಗೂ ಅಪೂರ್ಣ ಮಾಹಿತಿ ನೀಡಿದ ಅರ್ಜಿಯನ್ನು ತಿರಸ್ಕರಿಸಲಾಗುವುದು.
6. ಪದವಿ/ಸ್ನಾತಕೋತ್ತರ ಪದವಿಯ ಎಲ್ಲಾ ವರ್ಷಗಳ ಅಥವಾ ಎಲ್ಲಾ ಸೆಮಿಸ್ಟಾರ್‌ಗಳ ಅಂಕ ಪಟ್ಟಿಯ ಸ್ವದೃಢೀಕೃತ ನಕಲು ಪ್ರತಿಯನ್ನು ಲಗ್ಗತ್ತಿಸಬೇಕು.
7. ಅರ್ಜಿ ಶುಲ್ಕ:ರೂ.1,000+ GST ರೂ.180 ಹೀಗೆ ಒಟ್ಟು ರೂ.1180/– (ಒಂದು ಸಾವಿರದ ನೂರ ಎಂಭತ್ತು ರೂಪಾಯಿಗಳು ಮಾತ್ರ) ಅರ್ಜಿ ಶುಲ್ಕವನ್ನು ಪ್ರಭಾರ ಮುಖ್ಯಕಾರ್ಯ

ನಿರ್ವಾಹಣಾಧಿಕಾರಿ, "ದಿ ಮುಸ್ಲಿಂ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್"., ಮೈಸೂರು ಇವರ ಹೆಸರಿಗೆ ಡಿಮ್ಯಾಂಡ್ ಡ್ರಾಫ್ಟ್ ಮೂಲಕ ಪಾವತಿಸತಕ್ಕದ್ದು, ಅರ್ಜಿ ಶುಲ್ಕವನ್ನು ಹಿಂದಿರುಗಿಸುವುದಿಲ್ಲ.

8. ಆಯ್ಕೆಯಾದ ಅಭ್ಯರ್ಥಿಗಳಿಗೆ ಕನಿಷ್ಠ ಎರಡು ವರ್ಷದ ಪ್ರೊಬೇಶನರಿ ಅವಧಿ ಇದ್ದು ಈ ಅವಧಿಯಲ್ಲಿ ವೇತನ ಶ್ರೇಣಿಯಲ್ಲಿನ ಕನಿಷ್ಠ ಮೂಲ ವೇತನಕ್ಕೆ ಅನ್ವಯವಾಗುವ ಇತರೆ ಭತ್ಯಗಳು ಸೇರಿ ವೇತನ ನೀಡಲಾಗುವುದು. ಪ್ರೊಬೇಶನರಿ ಅವಧಿಯಲ್ಲಿ ಸೇವೆಯು ತೃಪ್ತಿಕರ ವಾಗದ್ದಿದ್ದಲ್ಲಿ ತರಬೇತಿ ಅವಧಿಯನ್ನು ವಿಸ್ತರಿಸುವ ಅಧಿಕಾರವು ಬ್ಯಾಂಕಿನ ಆಡಳಿತ ಮಂಡಳಿಗೆ ಇರುತ್ತದೆ.

9. ಬದಲಾದಕಾಯ್ದೆ ಮತ್ತು ನಿಯಮಗಳಿಗನುಗುಣವಾಗಿ ಹೆಚ್ಚಿನ ಷರತ್ತುಗಳನ್ನು ವಿಧಿಸುವ ಅಧಿಕಾರ ಬ್ಯಾಂಕಿನ ಸಿಬ್ಬಂಧಿ ನೇಮಕಾತಿ ಸಮಿತಿಗೆಇರುತ್ತದೆ.

10. ಈ ಜಾಹೀರಾತನ್ನು ಬದಲಾಯಿಸುವ, ನೇಮಕಾತಿಯನ್ನು ಮುಂದೂಡುವ ಅಥವಾ ಅಗತ್ಯವಿದ್ದಲ್ಲಿ ರದ್ದುಪಡಿಸುವ ಪೂರ್ಣ ಅಧಿಕಾರ ಆಡಳಿತ ಮಂಡಳಿಗೆ ಇರುತ್ತದೆ ಹಾಗೂ ಅಭ್ಯರ್ಥಿಯ ಆಯ್ಕೆಯ ಬಗ್ಗೆ ಬ್ಯಾಂಕಿನ ಸಿಬ್ಬಂಧಿ ನೇಮಕಾತಿ ಸಮಿತಿಯ ನಿರ್ಣಯ ಅಂತಿಮವಾಗಿರುತ್ತದೆ.

11. ಬ್ಯಾಂಕಿನ ಅಧಿಕೃತ ಜಾಲತಾಣ "http://www.muslimsbank.com"ದ ಮೂಲಕ ಅರ್ಜಿ ಫಾರಂಗಳನ್ನು ಡೌನ್ ಲೋಡ್ ಮಾಡಿಕೊಳ್ಳತಕ್ಕದ್ದು, ಅರ್ಜಿ ನಮೂನೆಗಳನ್ನು ಭರ್ತಿ ಮಾಡಿ ಸೂಕ್ತ ದಾಖಲೆಗಳನ್ನು ಸ್ವ ದೃಢೀಕೃತ ಪ್ರತಗಳೊಂದಿಗೆ ಅರ್ಜಿಯನ್ನು ಪ್ರಭಾರ ಮುಖ್ಯಕಾರ್ಯನಿರ್ವಾಹಣಾಧಿಕಾರಿ, "ದಿ ಮುಸ್ಲಿಂ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್"., ನ್ಯೂ ಸಯ್ಯಾಜಿರಾವ್‌ರಸ್ತೆ, ಮೈಸೂರು-570001. ಈ ವಿಳಾಸಕ್ಕೆ ಬ್ಯಾಂಕಿನ ಕೆಲಸದ ವೇಳೆಯಲ್ಲಿ ದಿನಾಂಕ: 03-07-2025ರ ಸಾಯಾಂಕಾಲ 7 ಗಂಟೆಯೊಳಗೆ ತಲುಪವಂತೆ ಕಳುಹಿಸತಕ್ಕದ್ದು. ಅರ್ಜಿಗಳನ್ನು ಸಲ್ಲಿಸಲು ನಿಗಧಿ ಪಡಿಸಿದ ಕೊನೆಯ ದಿನಾಂಕ ಸರ್ವಾಜನಿಕ ರಜೆ ದಿನವಾಗಿದ್ದರೆ ಮುಂದಿನ ಕೆಲಸದ ದಿನವು ಅರ್ಜಿಯನ್ನು ಸ್ವೀಕರಿಸಲು ಕೊನೆಯ ದಿನಾಂಕವಾಗಿರುತ್ತದೆ ಕೊನೆಯ ದಿನಾಂಕದ ನಂತರ ಬಂದ ಅರ್ಜಿಗಳನ್ನು ಹಾಗೂ ಅಪೂರ್ಣ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಅರ್ಜಿಯ ಜೊತೆಗೆ ನಿಗಧಿತ ಅರ್ಜಿ ಶುಲ್ಕದ ಡಿಮ್ಯಾಂಡ್ ಡ್ರಾಫ್ಟ್ ಸಲ್ಲಿಸತಕ್ಕದ್ದು.

12. ಅರ್ಜಿ ಸಲ್ಲಿಸುವ ಲಕೋಟೆಯ ಮೇಲೆ ಮುಖ್ಯಕಾರ್ಯನಿರ್ವಾಹಣಾಧಿಕಾರಿ, ಕಿರಿಯ ಸಹಾಯಕರು, ಅಟೆಂಡರ್‌ಗಳ ಪೈಕಿ ಯಾವ ಹುದ್ದೆಗೆ ಅರ್ಜಿ ಸಲ್ಲಿಸುತ್ತಿದ್ದೀರಿ ಎಂಬುದನ್ನು ಸ್ಪಷ್ಟವಾಗಿ ನಮೂದಿಸತಕ್ಕದ್ದು.

**ಸ್ಥಳ: ಮೈಸೂರು** **ಸಿಬ್ಬಂಧಿ ನೇಮಕಾತಿ ಸಮಿತಿಯ ಅಪ್ಪಣೆಯ ಮೇರೆಗೆ**

**ದಿನಾಂಕ:11-06-2025**

**ಪ್ರಭಾರ ಮುಖ್ಯಕಾರ್ಯನಿರ್ವಾಹಣಾಧಿಕಾರಿ**
**"ದಿ ಮುಸ್ಲಿಂ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್".,**
**ನ್ಯೂ ಸಯ್ಯಾಜಿರಾವ್‌ರಸ್ತೆ, ಮೈಸೂರು-570001**

# ದಿ ಮುಸ್ಲಿಂ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್

**ನ್ಯೂ ಸಯ್ಯಾಜಿರಾವ್‌ರಸ್ತೆ, ಮೈಸೂರು–570001**
**ದೂರವಾಣಿ ಸಂಖ್ಯೆ: 0821– 2442866**

**ಮುಖ್ಯಕಾರ್ಯನಿರ್ವಾಹಣಾಧಿಕಾರಿ, ಕಿರಿಯ ಸಹಾಯಕರು, ಮತ್ತುಅಟೆಂಡರ್ ಹುದ್ದೆಗಳಿಗೆ ನೇಮಕಾತಿಕುರಿತಂತೆ ಅಭ್ಯರ್ಥಿಗಳು ಪಾಲಿಸಲೇಬೇಕಾದ ಮುಖ್ಯ ಸೂಚನೆಗಳು.**

1. ಅಭ್ಯರ್ಥಿಗಳು ಕನ್ನಡ ಭಾಷೆಯಲ್ಲಿ ಓದುವ, ಬರೆಯುವ, ಮಾತನಾಡುವ ಹಾಗೂ ವ್ಯವಹಾರ ಜ್ಞಾನ ಹೊಂದಿರಬೇಕು.
2. ಅರ್ಜಿಯನ್ನು ಸ್ವ–ಹಸ್ತಾಕ್ಷರದಲ್ಲಿ ಭರ್ತಿ ಮಾಡಿ ಸಲ್ಲಿಸತಕ್ಕದ್ದು. ಅಪೂರ್ಣ ಮಾಹಿತಿ ನೀಡಿದ ಅರ್ಜಿಯನ್ನು ತಿರಸ್ಕರಿಸಲಾಗುವುದು.
3. ಅಭ್ಯರ್ಥಿಯು ಎಸ್.ಎಸ್.ಎಲ್.ಸಿ ಅಥವಾ ತತ್ಸಾಮಾನ ಪರೀಕ್ಷೆಯ ಅಂಕ ಪಟ್ಟಿಯಲ್ಲಿದ್ದಂತೆ ತಮ್ಮ ಹೆಸರು ಮತ್ತು ಜನ್ಮ ದಿನಾಂಕವನ್ನು ಸ್ಪಷ್ಟವಾಗಿ ನಮೂದಿಸತಕ್ಕದ್ದು. ಅಭ್ಯರ್ಥಿಯುತಾವು ವಾಸವಿರುವ ವಿಳಾಸವನ್ನು ಸ್ಪಷ್ಟವಾಗಿ ನಮೂದಿಸತಕ್ಕದ್ದು.
4. ಅಭ್ಯರ್ಥಿಯ ಇತ್ತೀಚಿನ ಬಣ್ಣದ ಪಾಸ್‌ಪೋರ್ಟ್ ಸೈಜ್ ಅಳತೆಯ 4 ಭಾವಚಿತ್ರಗಳನ್ನು ಅರ್ಜಿಯ ಕೂಡ ಲಗತ್ತಿಸತಕ್ಕದ್ದು ಹಾಗೂ ಭಾವಚಿತ್ರದ ಹಿಂಭಾಗದಲ್ಲಿ ಅಭ್ಯರ್ಥಿಯು ಸಹಿ ಮಾಡಿರತಕ್ಕದ್ದು.
5. ಅಭ್ಯರ್ಥಿಯು ವ್ಯಾಸಂಗ ಮಾಡಿದ ಪದವಿ ಹಾಗೂ ಕಂಪ್ಯೂಟರ್ ಕೋರ್ಸ್‌ಗಳ ಅಂಕಪಟ್ಟಿಯ ಸ್ವ–ದೃಢೀಕೃತ ನಕಲು ಪ್ರತಿಯನ್ನು ಲಗತ್ತಿಸತಕ್ಕದ್ದು.
6. ಮೇಲ್ಕಂಡ ಹುದ್ದೆಗೆ ಸಂಬಂಧಪಟ್ಟ ಸೇವಾ ಅನುಭವ ಇದ್ದಲ್ಲಿ ಸಂಬಂಧ ಪಟ್ಟವರಿಂದ ಪಡೆದ ದೃಢೀಕೃತ ಪ್ರತಿಯನ್ನು ಅರ್ಜಿಯ ಕೂಡ ಲಗತ್ತಿಸತಕ್ಕದ್ದು.
7. ಉತ್ತಮ ನಡತೆ ಹಾಗೂ ಕೌಟುಂಬಿಕ ಹಿನ್ನೆಲೆ ಹೊಂದಿರುವ ಅಭ್ಯರ್ಥಿಯು ವ್ಯಾಸಂಗ ಮಾಡಿದ ಶಾಲಾ/ ಕಾಲೇಜಿನ ಮುಖ್ಯಸ್ಥರನ್ನು ಹೊರೆತುಪಡೆಸಿ ಹಾಗೂ ಅಭ್ಯರ್ಥಿಯ ಸಂಬಂಧಿಗಳನ್ನು ಹೊರೆತುಪಡೆಸಿ ಇಬ್ಬರು ಗಣ್ಯರಿಂದ ಪೂರ್ಣ ವಿಳಾಸ, ಉದ್ಯೋಗ ವಿವರಗಳೊಂದಿಗೆ ಪಡೆದ ನಡತೆ ಪ್ರಮಾಣ ಪತ್ರ ಲಗತ್ತಿಸತಕ್ಕದ್ದು.
8. ಅರ್ಜಿಯೊಂದಿಗೆ ಯಾವುದೇ ಮೂಲ ಪ್ರಮಾಣ ಪತ್ರವನ್ನು ಲಗತ್ತಿಸಬಾರದು. ಪ್ರಮಾಣ ಪತ್ರಗಳ ಸ್ವ–ದೃಢೀಕೃತ ನಕಲು ಪ್ರತಿಗಳನ್ನು ಲಗತ್ತಿಸಬೇಕು. ಎಲ್ಲಾ ಅವಶ್ಯಕ ದಾಖಲೆ ಪತ್ರಗಳನ್ನು ಪೂರೈಸದಿದ್ದಲ್ಲಿ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.
9. ಲಿಖಿತ ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳಿಗೆ ಕರೆ (ಕಾಲ್ ಲೆಟರ್) ಕಳುಹಿಸಲಾಗುವುದು. ಅಭ್ಯರ್ಥಿಗಳು ಕಾಲ್ ಲೆಟರ್ ಹಾಗೂ ಗುರುತಿನ ಚೀಟಿಯೊಂದಿಗೆ ಪರೀಕ್ಷೆಗೆ ಹಾಜರಾಗಬೇಕು.
10. ಈ ಹುದ್ದೆಗೆ ಅರ್ಹ ಅಭ್ಯರ್ಥಿಗಳಿಗೆ ಲಿಖಿತ ಪರೀಕ್ಷೆ ಹಾಗೂ ಮೌಖಿಕ ಸಂದರ್ಶನ ನಡೆಯುವ ಮೂಲಕ ಆಯ್ಕೆ ಮಾಡಲಾಗುವುದು; 200 ಅಂಕಗಳ ಲಿಖಿತ ಪರಿಕ್ಷೆಇದ್ದು, ಈ ಪೈಕಿ ಕನ್ನಡ ಭಾಷೆಗಾಗಿ 50 ಅಂಕಗಳು, ಸಾಮಾನ್ಯಇಂಗ್ಲೀಷ್‌ಗಾಗಿ 25 ಅಂಕಗಳು, ಸಾಮಾನ್ಯ ಜ್ಞಾನಕ್ಕಾಗಿ 25 ಅಂಕಗಳು, ಸಹಕಾರ ವಿಷಯಕ್ಕೆ 50 ಅಂಕಗಳು ಮತ್ತು ಭಾರತದ ಸಂವಿಧಾನಕ್ಕಾಗಿ 25 ಅಂಕಗಳು, ಬ್ಯಾಂಕಿನ ಹುದ್ದೇಶಗಳು ಮತ್ತು ಕಾರ್ಯ

ಚಟುವಟಿಕೆಗಳಿಗಾಗಿ 25 ಅಂಕಗಳು= ಒಟ್ಟು 200 ಅಂಕಗಳಿಗೆ ಬಹು ಆಯ್ಕೆ ಮಾದರಿಯ(Objective Type Multiple Choice) ಪ್ರಶ್ನೆಗಳು ಒಳಗೊಂಡಿರುತ್ತದೆ, ಅಭ್ಯರ್ಥಿಯು ಲಿಖಿತ ಪರಿಕ್ಷೆಯಲ್ಲಿ ಪಡೆದ ಅಂಕಗಳ ಆಧಾರದ ಮೇಲೆ 1:5 ಅನುಪಾತದಲ್ಲಿ ಮೌಖಿಕ ಸಂದರ್ಶನ ನಡೆಸಿ, ಆಯ್ಕೆ ಮಾಡಲಾಗುವುದು.

11. ಹುದ್ದೆಗಳಿಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ರೂ.1,000+ GST ರೂ.180 ಹೀಗೆ ಒಟ್ಟು ರೂ.1180/– (ಒಂದು ಸಾವಿರದ ನೂರ ಎಂಭತ್ತು ರೂಪಾಯಿಗಳು ಮಾತ್ರ) ಏಮೆ ಡ್ರಾಫ್ಟ್‌ನ್ನು ಪ್ರಭಾರ ಮುಖ್ಯಕಾರ್ಯನಿರ್ವಾಹಣಾಧಿಕಾರಿ, ದಿ ಮುಸ್ಲಿಂ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್ ಮೈಸೂರು ಇವರ ಹೆಸರಿಗೆ ಖರೀದಿಸಿ ಅರ್ಜಿಯೊಂದಿಗೆ ಲಗತ್ತಿಸತಕ್ಕದ್ದು. ನಗದು, ಮನಿ ಆರ್ಡರ್, ಎನ್‌ಇಎಫ್‌ಟಿ, ಪೋಸ್ಟಲ್‌ಆರ್ಡರ್ ಇತ್ಯಾದಿಗಳನ್ನು ಸ್ವೀಕರಿಸಲಾಗುವುದಿಲ್ಲ.
12. ಭರ್ತಿ ಮಾಡಿದ ಅರ್ಜಿಯನ್ನು ಮೊಹರಾದ ಲಕೋಟೆಯಲ್ಲಿ ಯಾವ ಹುದ್ದೆಗೆ ಅರ್ಜಿ ಸಲ್ಲಿಸಲಾಗುತ್ತಿದೆ ಎಂಬುದನ್ನು ಸ್ಪಷ್ಟವಾಗಿ ನಮೂದಿಸಿ ನಿಗಧಿತ ಮೊತ್ತದ ಅರ್ಜಿ ಶುಲ್ಕದ ಡಿಮ್ಯಾಂಡ್ ಡ್ರಾಫ್ಟ್‌ನೊಂದಿಗೆ ಪ್ರಭಾರ ಮುಖ್ಯಕಾರ್ಯನಿರ್ವಾಹಣಾಧಿಕಾರಿ, ದಿ ಮುಸ್ಲಿಂ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್ ಮೈಸೂರು ಈ ವಿಳಾಸಕ್ಕೆ ನಿಗಧಿತ ದಿನಾಂಕದ ಒಳಗಾಗಿ ಸಲ್ಲಿಸತಕ್ಕದ್ದು.
13. ಅರ್ಜಿಗೆ ಪೂರ್ಣ ಪ್ರಮಾಣದ ಸಹಿ ಮಾಡಿರಬೇಕು ಹಾಗೂ ಬ್ಯಾಂಕ್ ಪೂರೈಸಿರುವ ಅರ್ಜಿ ನಮೂನೆಯಲ್ಲೆ ಅರ್ಜಿ ಸಲ್ಲಿಸಬೇಕು.
14. ಅಭ್ಯರ್ಥಿಯು ಮಾನಸಿಕ ಮತ್ತು ದೈಹಿಕ ಆರೋಗ್ಯವಂತರಾಗಿರಬೇಕು ಅವರ ನೇಮಕಾತಿಯ ಕರ್ತವ್ಯಗಳ ದಕ್ಷ ನಿರ್ವಹಣೆಗೆ ಆತಂಕವನ್ನುಂಟು ಮಾಡುವ ಸಂಭವವಿರುವ ಯಾವುದೇ ನ್ಯೂನತೆಯಿಂದ ಮುಕ್ತವಗಿರಬೇಕು. ಯೋಗ್ಯ ಹಾಗೂ ಸೂಕ್ತವಾದ ಅಭ್ಯರ್ಥಿಗಳನ್ನು ಮಾತ್ರ ನೇಮಕಾತಿ ಮಾಡಿಕೊಳ್ಳುವ ಅಧಿಕಾರವನ್ನು ಸಿಬ್ಬಂಧಿ ನೇಮಕಾತಿ ಸಮಿತಿ ಕಾಯ್ದಿರಿಸಿಕೊಂಡಿದೆ.

**ಸ್ಥಳ: ಮೈಸೂರು**

**ದಿನಾಂಕ:11–06–2025**

**ಸಿಬ್ಬಂಧಿ ನೇಮಕಾತಿ ಸಮಿತಿಯ ಅಪ್ಪಣೆಯ ಮೇರೆಗೆ**

**ಪ್ರಭಾರ ಮುಖ್ಯಕಾರ್ಯನಿರ್ವಾಹಣಾಧಿಕಾರಿ**
**"ದಿ ಮುಸ್ಲಿಂ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್".,**
**ನ್ಯೂ ಸಯ್ಯಾಜಿರಾವ್‌ರಸ್ತೆ, ಮೈಸೂರು–570001**